A.—Sri ALUR HANUMANTHAPPA (Deputy Minister for Minor Irrigation).—

(*a*) October 1962.

(*b*) Yes, the acquisition of lands is not completed.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಈ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಂಬಂಧ ಪಟ್ಟ ಕಾರ್ಯ ಪೂರ್ತಿಯಾಗಿಲ್ಲವೆಂದು ಹೇಳಿದ್ದೀರಿ, ನಿಧಾನವಾಗಲು ಕಾರಣವೇನು ?

† ಶ್ರೀ ಆಲೂರು ಹನುಮಂತಪ್ಪ.—ಪ್ರಿಲಿಮಿನರಿ ನೋಟಿಫಿಕೇಷನ್ ಮಾಡಿ ಆದಷ್ಟು ಬೇಗ ಮಾಡುತ್ತೇವೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಜಮೀನಿನ ವಿಸ್ತೀರ್ಣವೆಷ್ಟು ?

ಶ್ರೀ ಆಲೂರು ಹನುಮಂತಪ್ಪ.—29 ಎಕರೆ 25 ಗುಂಟೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಹಿಂದಿದ್ದ ಸಬ್ ಡಿವಿಜನ್ ಆಫೀಸರು ಬೇಕೆಂದು ತಡೆಗಟ್ಟಿದ್ದರು ಎಂಬುದು ತಪ್ಪು ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಆ ರೀತಿಯೇನೂ ಇಲ್ಲ.

Officials staying for more than three years in the Establishment Section of the Chief Engineer's Office, Bangalore.

**Q.*—546. Sri S. M. KRISHNA (Maddur).—

Will the Government be pleased to state :—

(*a*) whether it is not a fact that many of the Superintendents and Officials working in the Establishment Section in the Chief Engineer's Office are staying for more than three years in Bangalore ;

(*b*) the number of such Officials with their duration of stay in Bangalore ;

(*c*) if they are continued in this establishment, what are the special circumstances under which they are continued ;

(*d*) whether it is not a departure from the established practice ?

A.—G. B. SHANKAR RAO [(Parliamentary Secretary to Minister for Public Works)].—

(*a*) Yes, in certain cases.

(*b*) *Vide* list given below.

(*c*) In the interest of efficiency of work.

(*d*) No.

(SRI G. B. SHANKAR RAO)

List of Officials staying in the Establishment Section of the Chief Engineer's Office for more than 3 years with the duration of their stay in Bangalore.

Sl. No.	Name of the Office	Name of the Official	Designation	Duration Stay from
		Sriyuths—		
1	Chief Engineer (Communications & Buildings)	H. N. Pandurangayya	Superintendent	25-6-1959
2	Do	D. S. Joshi	,,	9-2-1961
3	Do	P. N. Ramakrishna Naidu	1st Division Clerk	22-3-1954
4	Do	C. Frances X'vier	,,	14-3-1958
5	Do	Smt. Grace Manaoramani	2nd Division Clerk	19-2-1958
6	Do	M. Ramanujam	,,	20-8-1958
7	Do	R. K. Rao	,,	24-9-1959
8	Do	Y. Sreenivasa	,,	9-3-1960
9	Do	Smt. D. Saroja	,,	1-4-1960
10	Do	Smt. Sharadamma	,,	18-7-1960
11	Do	Homba Hanumaya	,,	20-7-1960
12	Do	S. Ramaya	,,	3-10-1960
13	Do	Smt. N. Sathyaprema Devi	,,	Over three years.

Sri S. M. KRISHNA.—May I know how long the Government would continue to keep these people in the Central Office ?

†**Sri G. B. SHANKAR RAO.**—For some more time. We cannot give a definite time. Till such time as we get experienced hands to work in the Central Office, we may have to continue them.

Sri G. V. GOWDA.—It is found that 9 Second Division Clerks are also kept. If they are really efficient, why should Government not think of making available their services to other offices also ?

Sri G. B. SHANKAR RAO.—This is Central Office and experienced hands are required.

ಶ್ರೀ ಎಚ್. ಡಿ. ದೇವೇಗೌಡ.—ಕೆಲಸ ದಕ್ಷತೆಯಿಂದ ನಡೆಯುವ ದೃಷ್ಟಿಯಿಂದ ಎಂದು ಕಾರಣವನ್ನು ಕೊಟ್ಟಿದ್ದೀರಿ, ಈ ಸಿಬ್ಬಂದಿ ಶಾಖೆಯಲ್ಲಿ ಒಬ್ಬ ಅಧಿಕಾರಿಯನ್ನು ಕೇವಲ ಸ್ವಲ್ಪ ಕಾಲದಲ್ಲಿ ಎಂಟು ಹತ್ತು ಸ್ಥಳಗಳಿಗೆ ವರ್ಗ ಮಾಡಿರುವುದು ಗೊತ್ತಿದೆಯೆ ?

ಶ್ರೀ ವೀರೇಂದ್ರ ಪಾಟೀಲ್ (ರೋಕೋಪಯೋಗಿ ಶಾಖೆಯ ಮಂತ್ರಿಗಳು).—ಅಲ್ಲಿ ಕೆಲಸ ಮಾಡುವವರಲ್ಲಿ ಇಬ್ಬರು ಸೂಪರಿಂಟೆಂಡೆಂಟುಗಳನ್ನೂ 14 ಜನ ಮೊದಲ ದರ್ಜೆ ಗುಮಾಸ್ತರನ್ನೂ 13 ಜನ ಎರಡನೆ ದರ್ಜೆ ಗುಮಾಸ್ತರನ್ನೂ ಕಳೆದ ಏಳು ವರ್ಷಗಳಲ್ಲಿ ವರ್ಗ ಮಾಡಿದ್ದೇವೆ. ಆದರೆ ಕೆಲವರು 1958 ರಿಂದ ಮತ್ತು 1960 ರಿಂದ ಇದ್ದಾರೆ. ಇವರಲ್ಲಿ ಕೆಲವರು ಹೆಣ್ಣುಮಕ್ಕಳಿದ್ದಾರೆ, ಅವರನ್ನು ಅಲ್ಲಿಂದ ಬೇರೆ ಕಡೆಗೆ ಹಾಕುವುದು ಕಷ್ಟವಾಗಬಹುದು. ಎಸ್ಟಾಬ್ಲಿಷ್‌ಮೆಂಟ್ ಶಾಖೆಯಲ್ಲಿ ನೌಕರರು ಹೆಚ್ಚು ಕಾಲ ಇರಬಾರದೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ಬದಲಾಯಿಸಲು ಕೆಲವು ಕಷ್ಟಗಳು ಬರುತ್ತವೆ. ಆ ಶಾಖೆಗೆ ನಾಲ್ಕೈದು ಪ್ರದೇಶಗಳಿಂದ ಅಧಿಕಾರಿಗಳು ಬಂದಿದ್ದಾರೆ, ಆ ಬೇರೆ ಬೇರೆ ಭಾಗಗಳಲ್ಲಿ ಯಾವ ಯಾವ ರೀತಿ ಸರ್ವಿಸ್ ಕಂಡಿಷನ್ಸ್ ಇದ್ದುವು ಎನ್ನುವುದನ್ನು ಚೆನ್ನಾಗಿ ತಿಳಿದುಕೊಂಡಿರುವವರನ್ನು ಸ್ವಲ್ಪಕಾಲ ಇಟ್ಟುಕೊಳ್ಳಬೇಕಾಗುತ್ತದೆ. ಆದರೂ ಯಾರು ಬಹಳ ದಿವಸಗಳಿಂದ ಅಲ್ಲೆ ಇದ್ದಾರೋ ಅವರನ್ನು ಆದಷ್ಟು ಬೇಗ ವರ್ಗ ಮಾಡಬೇಕಾಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—13 ಜನರಲ್ಲಿ ನಾಲ್ಕು ಜನರು ಮಾತ್ರ ಹೆಣ್ಣುಮಕ್ಕಳು. ಇವರ ನೆಪದಲ್ಲಿ ಕೆಲವರನ್ನು ಹತ್ತು ವರ್ಷಗಳಿಂದಲೂ ಅಲ್ಲೇ ಇಟ್ಟುಕೊಂಡಿದ್ದಾರೆಯೇ ? ಅಧಿಕಾರಿಗಳ ಪ್ರೀತಿಗೆ ಪಾತ್ರರಾಗಿ, ಅವರು ಕೇಳಿದುದನ್ನು ಒದಗಿಸುತ್ತಿದ್ದಾರೆ, ಹೀಗೆ ಅವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿರುವುದರಿಂದಲ್ಲವೆ ಅಲ್ಲೇ ಇಟ್ಟುಕೊಂಡಿರುವುದು ?

ಶ್ರೀ ವೀರೇಂದ್ರ ಪಾಟೀಲ್.—1954 ರಿಂದ ಒಬ್ಬರು ಮತ್ತು 1958 ರಿಂದ ಇಬ್ಬರು ಮೂರು ಜನರಿದ್ದಾರೆ, 1960 ರಿಂದ ನಾಲ್ಕೈದು ಜನರಿದ್ದಾರೆ. ನಾಲ್ಕೈದು ಭಾಗಗಳಿಂದ ಬಂದಿರುವ ಹಾಗೂ ಆಯಾ ಪ್ರದೇಶಗಳ ಅನುಭವವಿರುವವರನ್ನು ಇಟ್ಟುಕೊಂಡಿದ್ದಾರೆ. ಆದರೂ ಈಗ ಆದಷ್ಟು ಬೇಗ ವರ್ಗ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇವರು ಬಹಳ ದಕ್ಷರು ಎಂದು ಹೇಳಿದಿರಿ, ಬೇರೆಯವರಿಗೂ ಟ್ರೈನಿಂಗ್ ಕೊಡುತ್ತೀರ ?

ಶ್ರೀ ವೀರೇಂದ್ರ ಪಾಟೀಲ್.—ಬೇರೆಯವರಿಗೆ ಟ್ರೈನಿಂಗ್ ಕೊಡುವ ಆವಶ್ಯಕತೆಯಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ದಕ್ಷರಾದವರನ್ನು ಇಟ್ಟುಕೊಂಡರೆ ಅನುಕೂಲವಾಗುತ್ತದೆಯಾದುದರಿಂದ ಬೇರೆ ಕಡೆಯೂ ಇಟ್ಟುಕೊಳ್ಳಲು ಒಪ್ಪುತ್ತೀರ ?

ಅಧ್ಯಕ್ಷರು.—ಅದು ಹೈಪೊತೆಟಿಕರ್ ಆಯಿತು.

ಶ್ರೀ ಪಿ. ವೆಂಕಟಗಿರಿಯಪ್ಪ.—ಚೀಫ್ ಇಂಜಿನಿಯರ ಕಚೇರಿಯಲ್ಲೇ ಹೆಚ್ಚು ದಿವಸವಿರುವುದರಿಂದ ಅಲ್ಲಿ ಲಂಚರುಷುವತ್ತಿಗೆ ಅವಕಾಶವಾಗುವುದಿಲ್ಲವೆ ?

ಶ್ರೀ ಎಸ್. ಶಿವಪ್ಪ.—ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಎಂಟು ಹತ್ತು ವರ್ಷಗಳು ಇದ್ದು ದಕ್ಷತೆಯನ್ನು ಪಡೆಯಬೇಕಾದರೆ ಯಾರು ಯಾರ ಕೃಪಾಶ್ರಯವನ್ನು ಎಷ್ಟೆಷ್ಟು ಪಡೆಯಬೇಕು ?

Mr. SPEAKER.—I put question No. 544.

Hand Pounding of Rice, Co-operative Societies in the State.

*Q.—544. Sri V. S. PATIL (Belgaum-I).—

Will the Government be pleased to state :—

(*a*) the number of Hand Pounding of Rice Co-operative Societies that are there in the State (Districtwise information may be given) ;

(*b*) what is the expenditure incurred by the Government annually by way of grants, etc., for these Co-operative Societies ;

(*c*) whether they are aware that most of these Societies are bogus and merely formed to get Government money without any work ?

A.—Sri KONDAJJI BASAPPA (Deputy Minister for Co-operation).—

(*a*) 140.

District-wise information is furnished below :—

1.	Bangalore	... ...	16
2.	Bijapur	... ...	Nil.
3.	Bidar	... ...	Nil.
4.	Bellary	... ...	2
5.	Belgaum	... ...	3
6.	Coorg	... ...	5
7.	Chikkamagalur	... ...	1
8.	Chitradurga	... ...	5
9.	Dharwar	... ...	12
10.	Gulbarga	... ...	1
11.	Hassan	... ...	1
12.	Kolar	... ...	6
13.	Mysore	... ...	10
14.	Mandya	... ...	7
15.	North Kanara	... ...	40
16.	Raichur	... ...	1
17.	Shimoga	... ...	4
18.	South Kanara	... ...	22
19.	Tumkur	... ...	4

(*b*) Nil.

(*c*) Does not arise in view of reply to clause (*b*) above.

Sri SANJEEVANATH AIKALA.—May I know which are the institutions which have been given financial aid by the Khadi and Village Industries Board ?

Sri KONDAJJI BASAPPA.—There are 140 Societies for hand-pounding of rice.

Mr. SPEAKER.—The Hon'ble Minister can place the list on the Table of the House.

Sri KONDAJJI BASAPPA.—Yes.

Sri G. V. GOWDA.—What is the assistance given ?

Sri KONDAJJI BASAPPA.—I have got the list district-wise and I shall place it on the Table.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈ 42 ಲಕ್ಷದಲ್ಲಿ ಮೈಸೂರಿಗೆ ಬಂದಿರುವ ಹಣವೆಷ್ಟು ?

ಶ್ರೀ ಕೊಂಡಜ್ಜಿ ಬಸಪ್ಪ.—1,73,788 ರೂಪಾಯಿ.

Sri J. P. SARWESH.—May I know why no grant is given to the society in Gulbarga District ?

Sri KONDAJJI BASAPPA.—Rs. 8,000 have been given.

Sri M. C. BASAPPA.—Is it possible to give a list of societies to which more than Rs. 50,000 is advanced ?

Sri KONDAJJI BASAPPA.—There are 10 or 11 such societies.

ಶ್ರೀ ಬಿ. ಎರ್. ಗೌಡ.—ಚಳ್ಳಕೆರೆಯಲ್ಲಿ ಒಂದು ಸೊಸೈಟಿಗೆ ಐದು ಸಾವಿರ ಕೊಟ್ಟು ಆರು ವರ್ಷವಾಯಿತು, ಫನೂ ಕೆಲಸವಾಗಿಲ್ಲವೆಂದು ದೂರು ಕೊಟ್ಟರೂ ಅದು ವಿಚಾರಣೆಯಾಗಿಲ್ಲ ವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

Sri KONDAJJI BASAPPA.—The society has received Rs. 15,250 by way of loan and Rs, 250 by way of grant. We have posted about 55 Special Auditors for the year 1963-64 and the audit of these societies is being undertaken. Only after receiving the report of audit, we will be able to take steps.

Sri M. C. BASAPPA.—May I know the names of those 10 societies, whether audit has been made in those 10 societies and whether any irregularities have been found ?

Sri KONDAJJI BASAPPA.—I am placing the entire list on the table of the House.

ಶ್ರೀ ಕುಂದೂರು ರುದ್ರಪ್ಪ.—ಚನ್ನಗಿರಿ ತಾಲ್ಲೂಕಿನಲ್ಲಿ ಸೊಸೈಟಿಗಳಿಗೆಷ್ಟು ಕೊಟ್ಟಿದ್ದೀರಿ ?

ಅಧ್ಯಕ್ಷರು.—138 ಸೊಸೈಟಿಗಳ ಬಗ್ಗೆ ವಿವರಗಳಿರುವ ಪಟ್ಟಿಯನ್ನು ಸಭೆಯ ಮುಂದಿಡು ತ್ತೇನೆಂದು ಆಗಲೇ ಉಪಮಂತ್ರಿಗಳು ಹೇಳಿದ್ದಾರೆ.

ಶ್ರೀ ಕೊಂಡಜ್ಜಿ ಬಸಪ್ಪ.—ಅವರಿಗೆ ಇದು ಗೊತ್ತಿದೆ. ಪೂರ್ತಿ ಲಸ್ಟ್ ಅಸೆಂಬ್ಲಿ ಟೇಬಲ್‌ಮೇಲೆ ಇಡಲಾಗಿದೆ. ಚನ್ನಬಸವೇಶ್ವರ ಸಹಕಾರ ಸಂಘ ನಲಕುಂದ್ರೆ ಇದಕ್ಕೆ ಸಾಲದ ರೂಪದಲ್ಲಿ ಹದಿನಾರು ಸಾವಿರ ರೂಪಾಯಿ ಸಹಾಯ ಕೊಟ್ಟಿದೆ. ಆರು ಸಾವಿರ ರೂಪಾಯಿ ಗ್ರಾಂಟ್ ಕೊಟ್ಟಿದೆ.

ಶ್ರೀ ಕುಂದೂರು ರುದ್ರಪ್ಪ.—ಮೈನೂರಿನಲ್ಲಿ ಒಂದು ಸಹಕಾರಿ ಸಂಘಕ್ಕೆ ಒಂದು ಲಕ್ಷ ರೂಪಾಯಿ ಸಹಾಯ ಧನ ಕೊಟ್ಟಿದೆ. ಆದರೆ ಅವರು ಅಕ್ಕಿ ಕೈಯಿಂದ ಕುಟ್ಟಿನದೆ ಮಿಷೀನ್‌ನಲ್ಲಿ ಭತ್ತ ಒಡೆದು ಬಿಟ್ಟು ಅದೇ ಅಕ್ಕಿಯನ್ನು ಕೊಟ್ಟಣದ ಅಕ್ಕಿ ಎಂದು ಮಾರುತ್ತಿದ್ದಾರೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಒಂದು ಲಕ್ಷ ರೂಪಾಯಿ ಮೇಲೆ ಸಹಾಯ ಧನ ಕೊಟ್ಟಿರತಕ್ಕಂಥ ಯಾವ ಸೊಸೈಟಿಯೂ ಇಲ್ಲಾ.

ಶ್ರೀ ಜಿ. ರಾಮೇಗೌಡ.—ಸಹಕಾರ ಸಂಘಗಳಿಗೆ ಸರಕಾರದವರು ಒಟ್ಟು ಎಷ್ಟು ಹಣ ಗ್ರಾಂಟ್ ರೂಪದಲ್ಲಿ ಕೊಟ್ಟಿದ್ದೀರಿ ?

ಶ್ರೀ ಕೊಂಡಜ್ಜಿ ಬಸಪ್ಪ.—ಸರಕಾರ ಅದನ್ನು ಕೊಟ್ಟಿಲ್ಲ. ಖಾದಿ ಅಂಡ್ ವಿಲೇಜ್ ಇಂಡಸ್ಟ್ರೀಸ್ ಬೋರ್ಡ್‌ನವರು ಲೋನ್ ಮತ್ತು ಗ್ರಾಂಟ್ ಕೊಟ್ಟಿದ್ದಾರೆ. ಸರಕಾರ ಕೊಡುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಸರಕಾರದಿಂದ ಹಣ ಪಡೆಯುವುದಕ್ಕಾಗಿ ಸಹಕಾರ ಸಂಘ ಗಳನ್ನು ದೃಷ್ಟಿ ಮಾಡಿಕೊಂಡಿದ್ದಾರೆ. ಕೊಟ್ಟಣದ ಅಕ್ಕಿ ಎಂದು ಪ್ರತ್ಯೇಕವಾಗಿ ಕುಟ್ಟಿನದೆ ಮಿಲ್ಲಿನಲ್ಲಿ ಸಿಕ್ಕುವೆ ಕೆಂಪು ಅಕ್ಕಿಯನ್ನು ತೆಗೆದುಕೊಂಡು ಅದಕ್ಕೆ ರೇಬರ್ ಹಚ್ಚಿ ಅದೇ ಅಕ್ಕಿಯನ್ನು ಕೊಟ್ಟಣದ ಅಕ್ಕಿ ಎಂದು ಮಾರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ? ಇಂಥದ್ದು ಸರಕಾರದ ಗಮನಕ್ಕೆ ಬಂದರೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ? ಅಂಥ ಸೊಸೈಟಿಯನ್ನು ರದ್ದು ಮಾಡುತ್ತೀರಾ ಅಥವಾ ಗ್ರಾಂಟ್ ಕೊಡುವುದನ್ನು ನಿಲ್ಲಿಸುತ್ತೀರಾ ?

Sri KONDAJJI BASAPPA.—They are under the control of Khadi and Village Industries Board and we have only to audit them through the Registrar.

ಶ್ರೀ ಕುಂದೂರು ರುದ್ರಪ್ಪ.—ನಲಕುಂದ್ರೆ ಸೊಸೈಟಿಗೆ 22 ಸಾವಿರ ರೂಪಾಯಿ ಕೊಟ್ಟಿದ್ದೀರಿ. ಅದರಲ್ಲಿ ಒಂದು ಬಿಲ್ಲಿಯೂ ಕೂಡ ಖರ್ಚಾಗಿಲ್ಲ. ಹಣ ದುರುಪಯೋಗವಾಗಿದೆ ಇದು ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೊಂಡಜ್ಜಿ ಬಸಪ್ಪ.—ಸರಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಬೈರಪ್ಪಾಜಿ.—ತುರುವೇಕೆರೆ ತಾಲ್ಲೂಕಿನಲ್ಲಿ ಒಂದು ಕೊಟ್ಟಣದ ಅಕ್ಕಿಯ ಸಹಕಾರ ಸಂಘ ಇದೆ. ಅಲ್ಲಿ ಹಣ ದುರುಪಯೋಗವಾಗಿದೆ. ಇಪತ್ತಿನವರೆಗೆ ರೆಕ್ಕೆಪತ್ರ ಆಡಿಟ್ ಮಾಡಿಲ್ಲ. ಅದನ್ನು ಆಡಿಟ್ ಮಾಡಿ ಹಣ ದುರುಪಯೋಗವಾಗಿರುವುದನ್ನು ಕಂಡು ಹಿಡಿದು ಪ್ರಾಸಿಕ್ಯೂಷನ್ ಮಾಡುತ್ತೀರಾ ?

ಶ್ರೀ ಕೊಂಡಜ್ಜಿ ಬಸಪ್ಪ.—ತುರುವೇಕೆರೆ ಸೊಸೈಟಿಗೆ ಐದು ಸಾವಿರ ರೂಪಾಯಿ ಲೋನ್ ಕೊಟ್ಟಿದೆ. ಆಡಿಟ್ ಆಗಿಲ್ಲ. ಸೊಸೈಟಿಗಳ ಆಡಿಟ್ ಮಾಡುವ ಉದ್ದೇಶದಿಂದ 55 ಜನ ಸ್ಪೆಷಲ್ ಆಡಿಟರುಗಳನ್ನು ಕಳಿಸಿದ್ದೇವೆ. ಅವರು ಆಡಿಟ್ ಮಾಡುತ್ತಾ ಇದ್ದಾರೆ. ಆಡಿಟ್ ರಿಪೋರ್ಟ್ ಬಂದ ನಂತರ ಎಲ್ಲಿ ಅನ್ಯಾಯವಾಗಿದೆಯೋ ಅಂಥಲ್ಲಿ ಸೂಕ್ತಕ್ರಮ ತೆಗೆದುಕೊಳ್ಳಲಾಗುವುದು.

Mr. SPEAKER.—Question Hour is over.